# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 320 |
| ಉತ್ತರಿಸಬೇಕಾಗಿದ್ದ ದಿನಾಂಕ | : | 17-07-2019 |
| ಸದಸ್ಯರ ಹೆಸರು | : | ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು |

| ಕ್ರ ಸಂ | ಪ್ರಶ್ನೆ | ಮಾಹಿತಿ |
|---|---|---|
| ಅ | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿನ ವಿವಿಧ ವೃಂದದ ಅಧಿಕಾರಿಗಳ, ಸಿಬ್ಬಂದಿಗಳ ಹುದ್ದೆಯ ವೃಂದ ಮತ್ತು ನೇಮಕಾತಿಯ ವಿವರಗಳನ್ನು ನೀಡುವುದು. | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವಿವಿಧ ವೃಂದದ ಅಧಿಕಾರಿಗಳ, ಸಿಬ್ಬಂದಿಗಳ ಹುದ್ದೆಯ ಸಂಪೂರ್ಣ ವಿವರಗಳನ್ನೊಳಗೊಂಡ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರತಿಯನ್ನು ಅನುಬಂಧ-01 ರಲ್ಲಿ ಒದಗಿಸಿದೆ. |
| ಆ | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ತರಬೇತಿದಾರರ ಮತ್ತು ಸಿಬ್ಬಂದಿಗಳ ಹುದ್ದೆಯನ್ನು ವೃಂದ ಮತ್ತು ನೇಮಕಾತಿಯಲ್ಲಿ ಸೇರಿಸಿಕೊಳ್ಳಲಾಗಿದೆಯೇ; ಹಾಗಿದ್ದಲ್ಲಿ, ಸಂಪೂರ್ಣ ವಿವರವನ್ನು ನೀಡುವುದು.<br>ಕರ್ನಾಟಕ ಕ್ರೀಡಾ ಪ್ರಾಧಿಕಾರವು ಅಸ್ತಿತ್ವಕ್ಕೆ ಬಂದು 20 ವರ್ಷಗಳಾಗಿದ್ದರೂ ಮಾಡದೇ ಇರಲು ಕಾರಣವೇನು; ಇದಕ್ಕೆ ಇರುವ ಅಡೆತಡೆಗಳೇನು; ಈ ಅಡೆತಡೆಗಳನ್ನು ನಿವಾರಿಸಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ತರಬೇತಿದಾರರ ಮತ್ತು ಸಿಬ್ಬಂದಿಗಳ ಹುದ್ದೆಯನ್ನು ವೃಂದ ಮತ್ತು ನೇಮಕಾತಿಯಲ್ಲಿ ಸೇರಿಸಿಕೊಳ್ಳಲಾಗುವುದೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಸೇರಿಸಿಕೊಳ್ಳಲಾಗುವುದು; | ಹೌದು.<br>ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವೃಂದ ನೇಮಕಾತಿ ನಿಯಮಗಳ ಪ್ರತಿಯನ್ನು ಅನುಬಂಧ-01 ರಲ್ಲಿ ಒದಗಿಸಿದೆ.<br>ಕರ್ನಾಟಕ ಕ್ರೀಡಾ ಪ್ರಾಧಿಕಾರವು ಸರ್ಕಾರದ ಆದೇಶ ಸಂಖ್ಯೆ: ಐ.ಟಿ.ವೈ 302 ಇಪೀಇ 94, ದಿ: 5-5-1995 ರನ್ವಯ ಕರ್ನಾಟಕ ಸಂಘಗಳ ನೋಂದಾವಣಿ ಕಾಯ್ದೆ 1960 ರಡಿ ನೋಂದಾಯಿಸಲ್ಪಟ್ಟ ಒಂದು ಸ್ವಾಯತ್ತ ಸಂಸ್ಥೆಯಾಗಿರುತ್ತದೆ.<br>ದಿನಾಂಕ 11-03-2010 ರಂದು ನಡೆದ ಕರ್ನಾಟಕ ಕ್ರೀಡಾ ಪ್ರಾಧಿಕಾರದ ಆಡಳಿತ ಮಂಡಳಿ ಸಭೆಯ ಅನುಮೋದನೆಯಂತೆ ದಿನಾಂಕ 27-04-2010 ರಂದು ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಹುದ್ದೆಗಳ ಸೃಜನೆ ಮತ್ತು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸಂಬಂಧಿಸಿದಂತೆ ವಿವರವಾದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಸರ್ಕಾರವು ತನ್ನ ಪತ್ರ ದಿನಾಂಕ 04-08-2010 ರಲ್ಲಿ ಕೋರಿರುವ ಹೆಚ್ಚಿನ ವಿವರಗಳಿಗೆ ದಿನಾಂಕ 29-09-2010 ರಂದು ಮಾಹಿತಿ ಒದಗಿಸಲಾಗಿದೆ. ದಿನಾಂಕ 06-12-2010 ರಂದು ಸರ್ಕಾರವು ಮತ್ತೊಮ್ಮೆ ಹೆಚ್ಚುವರಿ ಮಾಹಿತಿ ಕೋರಿದ್ದು, ಸದರಿ ಮಾಹಿತಿಯನ್ನು 29-12-2010 ರಂದು ಸರ್ಕಾರಕ್ಕೆ ಸಲ್ಲಿಸಿದೆ.<br>ಕರ್ನಾಟಕ ಕ್ರೀಡಾ ಪ್ರಾಧಿಕಾರದ ನೌಕರರು ತಮ್ಮ ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿ:11-11-2010 ರ ತನ್ನ ತೀರ್ಪಿನಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಪಾಲಿಸುವಂತೆ ಆದೇಶ ನೀಡಿರುತ್ತದೆ. ದಿನಾಂಕ 17-12-2011 |

ರಂದು ಹಿಂಬರಹವನ್ನು ನೀಡಿರುವ ಸರ್ಕಾರವು ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಸೇವಾ ಸಕ್ರಮಾತಿ ಮತ್ತು ವೃಂದ ಮತ್ತು ನೇಮಕಾತಿ ನಿಯಮ ರಚನೆ ಸಾಧ್ಯವಿಲ್ಲವೆಂದು ತಿಳಿಸಿದೆ. ದಿನಾಂಕ 12-06-2012 ರಂದು ಕರ್ನಾಟಕ ಕ್ರೀಡಾ ಪ್ರಾಧಿಕಾರದ ಆಡಳಿತ ಮಂಡಳಿಯ ಸುತ್ತು ನಿರ್ಣಯದ ಮೂಲಕ ಪ್ರಾಧಿಕಾರದ ಆಡಳಿತ ಮಂಡಳಿಯ ಅನುಮೋದನೆ ಪಡೆದು ದಿನಾಂಕ 27-09-2012 ರಲ್ಲಿ ಪ್ರಾಧಿಕಾರದ ವೃಂದ ಮತ್ತು ನೇಮಕಾತಿ ನಿಯಮಗಳ ರಚನೆಗೆ ಮತ್ತೊಮ್ಮೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸರ್ಕಾರವು ಪತ್ರ ದಿನಾಂಕ 01-06-2013 ರಲ್ಲಿ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಹುದ್ದೆಗಳ ಸೃಜನೆ ಮತ್ತು ವೃಂದ ಮತ್ತು ನೇಮಕಾತಿ ನಿಯಮಗಳ ರಚನೆಗೆ ಸಂಬಂಧಿಸಿದಂತೆ ಕೆಳಕಾಣಿಸಿದಂತೆ ನಿರ್ದೇಶನ ನೀಡಿದೆ.

" ಸರ್ಕಾರದ ಆದೇಶ ದಿನಾಂಕ 05-05-1995 ರಂತೆ ಇದೊಂದು ಸ್ವಾಯತ್ತ ಸಂಸ್ಥೆಯಾಗಿ ಸರ್ಕಾರೇತರ ಅನುದಾನದ ಸಹಾಯದಿಂದ ನಡೆದಿರುವ ಬಗ್ಗೆ ಯಾವುದೇ ದಾಖಲೆ ಒದಗಿಸಿರುವುದಿಲ್ಲ. ಒಂದು ವೇಳೆ ಈ ಸಂಸ್ಥೆಯು ಸರ್ಕಾರದ ಸಹಾಯಧನದಿಂದ ಮಾತ್ರ ತನ್ನ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವುದಾದಲ್ಲಿ ಇದರ ಕಾರ್ಯ ವಿಧಾನವು ಬೇರೆ ಯಾವುದೇ ಇಲಾಖೆಗಳಲ್ಲಿ ನಡೆಯುವ ಕಾರ್ಯ ವಿಧಾನಕ್ಕಿಂತ ಭಿನ್ನವಾಗಿರುವುದಕ್ಕೆ ಯಾವುದೇ ಕಾರಣವಿಲ್ಲ. ಪ್ರತ್ಯೇಕವಾಗಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಇರುವುದರಿಂದ ಅದೇ ಉದ್ದೇಶಕ್ಕಾಗಿ ಕರ್ನಾಟಕ ಕ್ರೀಡಾ ಪ್ರಾಧಿಕಾರ ಸಹ ಕಾರ್ಯನಿರ್ವಹಿಸುವ ಪ್ರಮೇಯ ಉದ್ಭವಿಸುವುದಿಲ್ಲ. ಈ ನಿಟ್ಟಿನಲ್ಲಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯನ್ನು ಬಲಪಡಿಸಿ ಕರ್ನಾಟಕ ಕ್ರೀಡಾ ಪ್ರಾಧಿಕಾರವು ಇಲಾಖೆಯ ಅಧಿಕಾರವನ್ನು ಮರು ಚಲಾಯಿಸದಂತೆ ಮಿತಿಗೊಳಿಸಿ ಅದರ ಕಾರ್ಯವನ್ನು, ಕಾರ್ಯ ನೀತಿ, ಮಾರ್ಗದರ್ಶನ ಹಾಗೂ ಸಮನ್ವಯ ನೀಡುವುದಕ್ಕೆ ಮಾತ್ರ ಸಮನ್ವಯಗೊಳಿಸಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯು ಅನುಷ್ಠಾನಗೊಳಿಸುವ ಅಧಿಕಾರ ಹೊಂದಿರಬೇಕು. ಆದ್ದರಿಂದ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಅಗತ್ಯವಾದ ಹುದ್ದೆಗಳನ್ನು ಸೃಜಿಸಲು ಪ್ರಸ್ತಾವನೆಯನ್ನು ಸೂಕ್ತ ಸಮರ್ಥನೆಯೊಂದಿಗೆ ಹಾಗೂ ಇದರಿಂದ ಉಂಟಾಗುವ ಆರ್ಥಿಕ ಹೊರೆಯ ವಿವರಗಳೊಂದಿಗೆ ಹುದ್ದೆಗಳನ್ನು ಸೃಜಿಸುವ ಬಗ್ಗೆ ಪ್ರಸ್ತಾವನೆ ಸಲ್ಲಿಸುವುದು".

ಕರ್ನಾಟಕ ಕ್ರೀಡಾ ಪ್ರಾಧಿಕಾರದ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ಸ್ ನಿಯಮ (10) ರ ಅನುಸಾರ ಪ್ರಾಧಿಕಾರದ ಆಡಳಿತ ಮಂಡಳಿಯು ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ರಚಿಸಲು ಮತ್ತು ಸಿಬ್ಬಂದಿಗಳನ್ನು ನೇಮಿಸಲು ಅಧಿಕಾರವನ್ನು ಹೊಂದಿರುತ್ತದೆ. ಕರ್ನಾಟಕ ಕ್ರೀಡಾ ಪ್ರಾಧಿಕಾರವು ತನ್ನ ಚಟುವಟಿಕೆಗಳಿಗೆ ಹಾಗೂ ಸಿಬ್ಬಂದಿ ವೇತನ ಪಾವತಿಗೆ ಸರ್ಕಾರದ ಅನುದಾನದ ಮೇಲೆ ಸಂಪೂರ್ಣವಾಗಿ ಅವಲಂಭಿತವಾಗಿದ್ದು, ಪ್ರಾಧಿಕಾರದಲ್ಲಿ ಯಾವುದೇ ಸಿಬ್ಬಂದಿ ನೇಮಕಾತಿ ಸರ್ಕಾರದ ಹಣಕಾಸಿನ ಮೇಲೆ ಆರ್ಥಿಕ ಇಂಗಿತಾರ್ಥ **(Financial Implication)** ಹೊಂದಿರುವುದರಿಂದ ಸರ್ಕಾರದ ಅನುಮೋದನೆ ಅಗತ್ಯವಾಗಿದ್ದು, ದಿನಾಂಕ 27-09-2012 ರಂದು ಸಲ್ಲಿಸಲಾದ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ಒದಗಿಸುವಂತೆ ದಿನಾಂಕ 03-10-2013ರಂದು ಸರ್ಕಾರಕ್ಕೆ ಕೋರಿರುತ್ತಾರೆ.

ಈ ಸಂಬಂಧ ಸರ್ಕಾರದ ಪತ್ರ ದಿನಾಂಕ 06-06-2014 ರಲ್ಲಿ ಕೆಳಕಾಣಿಸಿದಂತೆ ತಿಳಿಸಲಾಗಿದೆ.

'ಯುವಜನ ಸೇವಾ ಕ್ರೀಡಾ ಇಲಾಖೆಯಲ್ಲಿ ಈಗಾಗಲೇ 313 ಹುದ್ದೆಗಳಿರುತ್ತದೆ. ಅದರ ಹೊರತಾಗಿ ಈಗ ಕ್ರೀಡಾ ಪ್ರಾಧಿಕಾರಕ್ಕೆ 268 ಹುದ್ದೆಗಳನ್ನು ಸೃಜಿಸಲು ಪ್ರಸ್ತಾಪಿಸಲಾಗಿದೆ. ಅದರಲ್ಲಿ 192 ಕೋಚ್ ಹುದ್ದೆಗಳು ಮತ್ತು 35 ಮಾರ್ಕರ್ ಹುದ್ದೆಗಳಂತೆ ಒಟ್ಟು 227 ಹುದ್ದೆಗಳು ಸೇರಿರುತ್ತವೆ. ಈ ಹುದ್ದೆಗಳು ಜಿಲ್ಲಾ / ತಾಲ್ಲೂಕು ಮಟ್ಟದಲ್ಲಿಯೇ ಸ್ಟೇಡಿಯಂಗಳಿಗೆ ಬೇಕಾಗಿರುವ ಹುದ್ದೆಗಳಾಗಿದ್ದು, ಇಂತಹ ಹುದ್ದೆಗಳು ಇಲಾಖೆಯ ಅಧೀನದಲ್ಲಿ ಇರಬೇಕು ಹೊರತು ಪ್ರಾಧಿಕಾರದ ಅಧೀನದಲ್ಲಿ ಅಲ್ಲ. ಅದರ ಹೊರತು ಉಳಿದ 41 ಆಡಳಿತಾತ್ಮಕ ಹುದ್ದೆಗಳಾಗಿದ್ದು, ಪ್ರಾಧಿಕಾರದ ಕೇಂದ್ರ ಕಚೇರಿಯಲ್ಲಿ ಅಷ್ಟು ಹುದ್ದೆಗಳು ಅಗತ್ಯವೇ ಎಂಬುದು ಪರಿಶೀಲಿಸಿ ಪ್ರತಿ ಹುದ್ದೆ ಬಗ್ಗೆ ವಿವರಗಳನ್ನು ನೀಡಿ ಸಮರ್ಥಿಸಬೇಕಾಗುತ್ತದೆ. ಸ್ಟೇಡಿಯಂಗಳ ನಿರ್ವಹಣೆ ಹಾಗೂ ಅದಕ್ಕೆ ಬೇಕಾದ ಮೇಲೆ ತಿಳಿಸಿದ ಕೋಚ್‌ಗಳ ಹುದ್ದೆಗಳನ್ನು ಇಲಾಖೆಯ ಅಧೀನದಲ್ಲಿ ಇರುವುದು ಸೂಕ್ತ ಎಂದು ತಿಳಿಸಿದೆ. ಪ್ರಾಧಿಕಾರಕ್ಕೆ ಕೇಂದ್ರ ಕಚೇರಿಯಲ್ಲಿ ಬೇಕಾಗುವ ಕನಿಷ್ಠ ಹುದ್ದೆಗಳನ್ನು ಮಾತ್ರ ಸೃಜಿಸಬಹುದಾಗಿದ್ದರು, ಇಲಾಖೆಯಲ್ಲಿರುವ ಹುದ್ದೆಗಳನ್ನು ಮರು ಹೊಂದಾಣಿಕೆ ಮಾಡಿ ಹಂಚಿಕೆ ಮಾಡುವುದರಿಂದ ಕನಿಷ್ಠ ಮಟ್ಟದ ಹೊಸ ಹುದ್ದೆಗಳ ಸೃಜನೆಯಾಗುವಂತೆ ನೋಡಿಕೊಳ್ಳಲು ತಿಳಿಸಿದೆ. ಆ ಪ್ರಕಾರ ಪ್ರಾಧಿಕಾರದಿಂದ ಇಲಾಖೆ

ಪಡೆಯುವ ಬಗ್ಗೆ ಪರಿಶೀಲಿಸಲು ಕೋರಿದೆ ಹಾಗೂ ಅನುದಾನಿತ ಸಂಸ್ಥೆಗಳು ನಿರ್ವಹಿಸಬೇಕಾದ ಕಾರ್ಯಗಳನ್ನು ಮಾತ್ರ ಪ್ರಾಧಿಕಾರಕ್ಕೆ ಬಿಟ್ಟುಕೊಡಬೇಕೆಂದು ತಿಳಿಸಿದೆ. ಈ ಹಿನ್ನೆಲೆಯಲ್ಲಿ ಹುದ್ದೆಗಳೂ ಸಹ ಅಗತ್ಯಕ್ಕೆ ಅನುಸರಿಸಿ ಪ್ರಾಧಿಕಾರಕ್ಕೆ ಪ್ರಸ್ತಾಪಿಸಬೇಕೆಂದು ಮತ್ತು ಪುನರ್‌ಪರಿಶೀಲಿಸಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ನಿರ್ದೇಶಿಸಿದೆ'.

2014-15ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-260 ರಲ್ಲಿ ಹಿಂದಿನ ಸನ್ಮಾನ್ಯ ಮುಖ್ಯಮಂತ್ರಿಗಳು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯನ್ನು ಪುನರ್ ರಚಿಸಿ ಬಲಪಡಿಸುವುದಾಗಿ ಘೋಷಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, ದಿನಾಂಕ 08-04-2014 ರ ಪ್ರಸ್ತಾವನೆಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ 117 ತರಬೇತುದಾರರ ಹುದ್ದೆಗಳು ಒಳಗೊಂಡಂತೆ ಒಟ್ಟು 290 ಹೊಸ ಹುದ್ದೆಗಳ ಸೃಜನೆ ಮಾಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸರ್ಕಾರದ ಪತ್ರ ದಿನಾಂಕ 21-05-2014 ರಲ್ಲಿ ಸೂಚಿಸಿದಂತೆ ದಿನಾಂಕ 30-07-2014 ರ ಪ್ರಸ್ತಾವನೆಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ 117 ತರಬೇತುದಾರರ ಹುದ್ದೆಗಳು ಒಳಗೊಂಡಂತೆ ಒಟ್ಟು 300 ಹೊಸ ಹುದ್ದೆಗಳ ಸೃಜನೆ ಒಳಗೊಂಡಂತೆ ಸಂಪೂರ್ಣ ವಿವರಗಳೊಂದಿಗೆ ಪರಿಷ್ಕೃತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಹಿರಿಯ ಅಧಿಕಾರಿಗಳ ಮಟ್ಟದಲ್ಲಿ ನಡೆದ ಚರ್ಚೆ ಆಧರಿಸಿ, ದಿನಾಂಕ 29-12-2014 ರಂದು 147 ತರಬೇತುದಾರರ ಹುದ್ದೆಗಳು ಒಳಗೊಂಡಂತೆ 824 ಹೊಸ ಹುದ್ದೆಗಳ ಸೃಜನೆ ಒಳಗೊಂಡಂತೆ ಪರಿಷ್ಕೃತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಸೂಚಿಸಿದಂತೆ ಪ್ರಸ್ತಾವನೆಯನ್ನು ತಿದ್ದುಪಡಿ ಮಾಡಿ ದಿನಾಂಕ 18-02-2015 ರಂದು 132 ತರಬೇತುದಾರರ ಹುದ್ದೆಗಳು ಒಳಗೊಂಡಂತೆ 804 ಹೊಸ ಹುದ್ದೆಗಳ ಸೃಜನೆ ಒಳಗೊಂಡ ಪರಿಷ್ಕøತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ನಿರ್ದೇಶಕರೊಂದಿಗೆ ಚರ್ಚಿಸಿ, ಸೂಚಿಸಿದಂತೆ 895 ಹೊಸ ಹುದ್ದೆಗಳ ಸೃಜನೆಗೆ (220 ತರಬೇತುದಾರರ ಹುದ್ದೆಗಳು ಸೇರಿದಂತೆ) ಸರ್ಕಾರಕ್ಕೆ ದಿನಾಂಕ 22-09-2015 ರಂದು ಪುನಃ ಪರಿಷ್ಕøತ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ ದಿನಾಂಕ 27-06-2016 ರಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ / ಕರ್ನಾಟಕ ಕ್ರೀಡಾ ಪ್ರಾಧಿಕಾರದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮಾರ್ಪಡಿಸಲು / ರಚಿಸಲು ಪರಿಶೀಲಿಸಿ ಕರಡು ನಿಯಮಗಳನ್ನು ರಚಿಸಲು ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಪರಿಣಿತರನ್ನು ಒಳಗೊಂಡ ಸಮಿತಿಯನ್ನು ರಚಿಸಿದೆ.

1. ಸರ್ಕಾರದ ಉಪ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
2. ಸರ್ಕಾರದ ಉಪ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು)
3. ಶ್ರೀ ದೇವರಾಜ್, ನಿವೃತ್ತ ಉಪ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಅಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು)
4. ಉಪ ನಿರ್ದೇಶಕರು (ಆಡಳಿತ), ಯುವ ಸಬಲೀಕರಣ ಮತ್ತು ಕ್ರೀಡಾ ನಿರ್ದೇಶನಾಲಯ

ಸರ್ಕಾರದ ದಿನಾಂಕ 27-06-2016 ರ ಆದೇಶದನ್ವಯ ವೃಂದ ಮತ್ತು ನೇಮಕಾತಿ ನಿಯಮಗಳ ರಚನಾ ಸಮಿತಿಯ ತೀರ್ಮಾನದಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯನ್ನು ಪುನರ್ ರಚಿಸಿ ಬಲಪಡಿಸಲು ಹಾಗೂ ಕರ್ನಾಟಕ ಕ್ರೀಡಾ ಪ್ರಾಧಿಕಾರಕ್ಕೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲು ವಿವರವಾದ ಪ್ರಸ್ತಾವನೆಯನ್ನು ತಯಾರಿಸಿ ದಿನಾಂಕ 20-05-2017 ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ 822 ಹುದ್ದೆಗಳ ಸೃಜನೆ ಹಾಗೂ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ತರಬೇತುದಾರರ 357 ಹುದ್ದೆಗಳು ಒಳಗೊಂಡಂತೆ ಒಟ್ಟು 394 ಹುದ್ದೆಗಳ ಸೃಜನೆ ಪ್ರಸ್ತಾಪಿಸಲಾಗಿದೆ. ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಹುದ್ದೆಗಳ ಸೃಜನೆಗೆ ಸಂಬಂಧಿಸಿದಂತೆ ಪ್ರಸ್ತಾವನೆ ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ.

| | | |
|---|---|---|
| | | ಈ ಮಧ್ಯೆ ಸರ್ಕಾರದ ಪತ್ರ ದಿನಾಂಕ 10-01-2018 ರಲ್ಲಿ ಕರ್ನಾಟಕ ಕ್ರೀಡಾ ಪ್ರಾಧಿಕಾರದ ತರಬೇತುದಾರರನ್ನು ಮತ್ತು ಸಿಬ್ಬಂದಿಗಳನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ವಿಲೀನಗೊಳಿಸುವ ಬಗ್ಗೆ ಅಂದಿನ ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿರುವ ಹಿನ್ನೆಲೆಯಲ್ಲಿ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸಹಮತಿಯನ್ನು ಕೋರಲಾಗಿ, ಸಿಆಸು ಇಲಾಖೆಯು ಪ್ರಸ್ತಾವನೆಗೆ ಸಹಮತಿ ನೀಡಿರುವುದಿಲ್ಲ. |
| ೩ | ತರಬೇತಿದಾರರ ಮತ್ತು ಸಿಬ್ಬಂದಿಗಳ ಸೇವೆಯನ್ನು ಈ ಹಿಂದೆ ಸದನದಲ್ಲಿ ಚರ್ಚಿಸಿದಂತೆ ಸಕ್ರಮ ಖಾಯಂಮಾತಿ ಮಾಡಲು ಕೈಗೊಂಡಿರುವ ಕ್ರಮದ ವಿವರಗಳೇನು; ಸಕ್ರಮ ಖಾಯಂಮಾತಿಯ ಕಾರ್ಯ ಯಾವ ಹಂತದಲ್ಲಿದೆ; ಸದನದಲ್ಲಿ ಖಾಯಂಮಾತಿ ಮಾಡಲು ಭರವಸೆ ನೀಡಲಾಗಿತ್ತೆ; | ಕರ್ನಾಟಕ ಕ್ರೀಡಾ ಪ್ರಾಧಿಕಾರದ ತರಬೇತುದಾರರ ಮತ್ತು ಸಿಬ್ಬಂದಿ ವರ್ಗದವರ ಸಮಸ್ಯೆಗಳನ್ನು ಆಲಿಸಲು ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 18-02-2019 ರಂದು ಅಧಿಕಾರಿಗಳ ಹಾಗೂ ಕ್ರೀಡಾ ತರಬೇತುದಾರರ ಸಭೆಯು ಜರುಗಿದ್ದು, ಸದರಿ ಸಭೆಯಲ್ಲಿ ಪ್ರಾಧಿಕಾರದ ನೌಕರರ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಒಂದು ಸಮಿತಿಯನ್ನು ರಚಿಸಲು ಕ್ರಮಕೈಗೊಳ್ಳಲಾಗುವುದು ಎಂದು ಮಾನ್ಯ ಸಚಿವರು ಪ್ರಾಧಿಕಾರದ ನೌಕರರಿಗೆ ತಿಳಿಸಿದ್ದಾರೆ. ಪ್ರಾಧಿಕಾರದ ನೌಕರರು ದಿನಾಂಕ 25-02-2019 ರಂದು ಸಲ್ಲಿಸಿರುವ ಮನವಿಯಲ್ಲಿರುವ ಅಂಶಗಳನ್ನು ಕೂಲಂಕುಷವಾಗಿ ನಿಯಮಾನುಸಾರ ಪರಿಶೀಲಿಸಿ ಸರ್ಕಾರಕ್ಕೆ ವರದಿ ನೀಡಲು ಆಯುಕ್ತರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಸರ್ಕಾರದ ಪತ್ರ ದಿನಾಂಕ 22-03-2019 ರಲ್ಲಿ ಸೂಚಿಸಲಾಗಿದೆ.<br>ಈ ಸಂಬಂಧ ಪ್ರಾಧಿಕಾರದ ನೌಕರರು ಸಲ್ಲಿಸಿರುವ ಮನವಿಯಲ್ಲಿನ ಅಂಶಗಳನ್ನು ಕೂಲಂಕುಷವಾಗಿ ನಿಯಮಾನುಸಾರ ಪರಿಶೀಲಿಸಿ, ಸರ್ಕಾರಕ್ಕೆ ವರದಿಯನ್ನು ನೀಡಲು ದಿನಾಂಕ 24-04-2019 ರಂದು ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸರ್ಕಾರದ ಉಪ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಇಲಾಖೆಯ ಅಧಿಕಾರಿಗಳು ಹಾಗೂ ತರಬೇತುದಾರರು ಮತ್ತು ಸಿಬ್ಬಂದಿ ವರ್ಗದವರನ್ನೊಳಗೊಂಡಂತೆ ಸಮಿತಿಯನ್ನು ರಚಿಸಲಾಗಿರುತ್ತದೆ.<br>ಈ ಸಮಿತಿಯು ಇದುವರೆಗೂ ಐದು ಬಾರಿ ಸಭೆ ಸೇರಿದ್ದು, ವಿವಿಧ ವಿಷಯಗಳನ್ನು ವಿವರವಾಗಿ ಚರ್ಚಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯ ವರದಿಯನ್ನು ಸಧ್ಯದಲ್ಲಿ ಸರ್ಕಾರಕ್ಕೆ ಸಲ್ಲಿಸುತ್ತಿದ್ದು, ಅದರೊಡನೆ ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸಲಾಗುವುದು. |

| | | |
|---|---|---|
| ಈ | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ತರಬೇತುದಾರರ, ಸಿಬ್ಬಂದಿಗಳ ವೃಂದವಾರು ವಿವರ ನೀಡುವುದು; ಅದರಲ್ಲಿ ಖಾಯಂ ನೌಕರರ ಹಾಗೂ ಗುತ್ತಿಗೆ ನೌಕರರ ವಿವರಗಳನ್ನು ನೀಡುವುದು; ಎಷ್ಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ ಎನ್ನುವದರ ಬಗ್ಗೆ ಸಂಪೂರ್ಣ ವಿವರ ನೀಡುವುದು | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ತರಬೇತುದಾರರು ಮತ್ತು ಸಿಬ್ಬಂದಿ ವರ್ಗದವರ ವೃಂದವಾರು ವಿವರಗಳನ್ನು ಅನುಬಂಧ-02 ಮತ್ತು 03 ರಲ್ಲಿ ಲಗತ್ತಿಸಿದೆ. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳು ಖಾಯಂ ಸಿಬ್ಬಂದಿಗಳಾಗಿರುತ್ತಾರೆ. ಕರ್ನಾಟಕ ಕ್ರೀಡಾ ಪ್ರಾಧಿಕಾರದ ಸಿಬ್ಬಂದಿಗಳು ಮಾಸಿಕ ಸಂಚಿತ ವೇತನ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. |
| ಉ | ಪ್ರತಿ ವರ್ಷ ಎಷ್ಟು ಜನ ನೌಕರರನ್ನು ಯಾವ ವೃಂದದ ನೌಕರರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುತ್ತಿದೆ. (ಕಳೆದ 05 ವರ್ಷದ ಮಾಹಿತಿ ನೀಡುವುದು) | ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ 2018-19ನೇ ಸಾಲಿನಲ್ಲಿ 52 ತರಬೇತುದಾರರು ಮತ್ತು 16 ತಾಂತ್ರಿಕ ಸಿಬ್ಬಂದಿಗಳನ್ನು ಮಾಸಿಕ ಸಂಚಿತ ವೇತನದ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ನೇಮಕಮಾಡಿಕೊಳ್ಳಲಾಗಿದೆ. |
| ಊ | ಕರ್ನಾಟಕ ಕ್ರೀಡಾ ಪ್ರಾಧಿಕಾರವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಬೇರ್ಪಡಿಸಲು ಸಾಧ್ಯವಾಗುವುದೇ : ಸಾಧ್ಯವಾಗದಿದ್ದಲ್ಲಿ ಅದಕ್ಕೆ ಕಾರಣವೇನು (ಸಂಪೂರ್ಣ ವಿವರ ನೀಡುವುದು) | ಕರ್ನಾಟಕ ಕ್ರೀಡಾ ಪ್ರಾಧಿಕಾರವು ಕರ್ನಾಟಕ ಸಂಘಗಳ ನೋಂದಾವಣಿ ಕಾಯ್ದೆ-1960 ರ ಅಡಿ ನೋಂದಾಯಿತ ಸಂಸ್ಥೆಯಾಗಿದ್ದು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಪ್ರತ್ಯೇಕವಾದ ಕಾನೂನಾತ್ಮಕ ಅಸ್ಥಿತ್ವವನ್ನು ಹೊಂದಿದೆ. ಕರ್ನಾಟಕ ಕ್ರೀಡಾ ಪ್ರಾಧಿಕಾರವು ತನ್ನದೆ ಆದ ಆಡಳಿತ ಮಂಡಳಿಯನ್ನು ಹೊಂದಿದ್ದು, ಆಡಳಿತಾತ್ಮಕ ಸ್ವಾಯತ್ತತೆಯನ್ನು ಹೊಂದಿದೆ. |

ಸಂಖ್ಯೆ:ವೈಎಸ್ ಡಿ/ಇವೈಡಬ್ಲ್ಯೂ/79/2019

(ಕೆ. ಎಸ್. ಈಶ್ವರಪ್ಪ)
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

IVA -F 7-B/B



**YOUTH SERVICES SECRETARIAT**

**NOTIFICATION No: YuSeYi 91 YuYiSe 2005, Dated:24-02-2011**

The draft of the Karnataka General Services (Directorate of Youth Services and Sports) (Recruitment) Rules 2011 which the Government of Karnataka proposes to make in exercise of the powers conferred by sub section (1) of section 3 read with section 8 of the Karnataka State Civil Services Act, 1978 (Karnataka Act 14 of 1990) is hereby published as required by clause (a) of sub-section (2) section 3 of the said Act, for the information of all the persons likely to be affected thereby and Notice is here by given that the said draft will be taken in to consideration after fifteen days from the date of its publication in the Official Gazette.

Any objection or suggestion, which may be received by the State Government from any person with respect of the said draft before the expiry of period specified above, will be considered by the State Government. The objections and suggestions may be addressed to the Principal Secretary to the Government, Youth Services Department, Multistoried Building, Bangalore-560001.

**DRAFT RULES**

**1. Title and Commencement.** -(1)These Rules may be called the Karnataka General Services (Directorate of Youth Services and Sports) (Recruitment) Rules 2011.

(2) They shall come in to force from the date of their publication in the Official Gazettee.

**2. Method of recruitment and minimum qualification.** - The Karnataka Youth Services and Sports Department shall consist of such category of posts with scales of pay specified in column (2) of the schedule. The number and nature of posts, the method of recruitment and the minimum qualifications, if any, shall be as specified in the corresponding entries in column (3), (4) and (5) thereof.

**3. Repeal and Savings.**- The Karnataka General Services (Directorate of Youth Services) (Recruitment) Rules 1975 are here by repealed.

Provided that the repeal shall not affect,-

(a) the previous operation of the said rule or any thing duly done or suffered there under; or

(b) any right, privilege, obligation or liability already acquired, accrued or incurred under the said rules.

**SCHEDULE**

**(See Rule 2)**

| Sl. No. | Category of Posts and the Scale of Pay | NO of Posts | | | Method of recruitment | Minimum qualification |
|---|---|---|---|---|---|---|
| | | P | T | Total | | |
| (1) | (2) | (3) | | | (4) | (5) |
| 1 | Commissioner/ Director of Youth Services & Sports | 1 | - | 1 | By posting of IAS/IPS/ KAS Officer | - |
| 2 | Joint Director (Rs.20025-28275) | (2) 2 | (5) - | (7) 2 Note - Out of 7 Posts, 5 Posts shall be abolished on occurrence of vacancy on retirement or otherwise of the present incumbents. | By promotion from the cadre of Deputy Director of Youth Services. If no suitable person is available for promotion, by deputation of Officer of equivalent cadre from any of the State Civil Services. | **For promotion.**– must have put in a service of not less than three years in the cadre of Deputy Director. |

| Sl. No. | Category of Posts and the Scale of Pay | NO of Posts | | | Method of recruitment | Minimum qualification |
|---|---|---|---|---|---|---|
| | | P | T | Total | | |
| (1) | (2) | (3) | | | (4) | (5) |
| 3 | Deputy Director (Rs.14050-25050) | 1 | 6 | 7 | By promotion from the cadre of Assistant Director and from the cadre of Coaches (District Coaches) in the ratio of 3:1 respectively, every fourth vacancy being filled from the cadre of coaches. | **For promotion.-** (1) Must have put in a service of not less than Five years in the cadre of Assistant Director<br>(2) For promotion from the Cadre of Coaches must have put in a service of not less than Five years.<br>Provided that persons with not less than Five years of service are not available then, persons with not less than Three years of service may be considered for promotion. |
| 4 | Asst. Executive Engineer (Rs.14050-25050) | - | 1 | 1 | By promotion from the cadre of Asst. Engineer. If no suitable candidate is available for promotion, by deputation of Officer of equivalent cadre from Public Works Engineering Department. | |
| 5 | Assistant Director (Rs.11400-21600) | 26 | 1 | 27 | (1) Forty percent by direct recruitment in accordance with the Karnataka Recruitment of Gazetted Probationers (Appointment by Competitive Examinations) Rules 1997. and<br>(2) Sixty percent by promotion from the cadre of Superintendents. | **For promotion.-** must have put in a service of not less than five years in the cadre of Superintendents.<br>Provided that persons with not less than five years of service are not available then persons with not less than three years of service may be considered for promotion. |
| 6 | Editor (Rs.11400-21600) | 1 | - | 1 | By promotion from the cadre of Sub-Editor. | **For promotion.-** must have put in a service of not less than five years in the cadre of Sub-Editor. |

| Sl. No. | Category of Posts and the Scale of Pay | NO of Posts P | NO of Posts T | NO of Posts Total | Method of recruitment | Minimum qualification |
|---|---|---|---|---|---|---|
| (1) | (2) | (3) | | | (4) | (5) |
| 7 | Accounts Officer<br>(Rs.11400-21600) | 1 | - | 1 | (1) By promotion from the cadre of Accounts Superintendent<br>(2) If no suitable person is available for promotion, then by deputation of an Accounts Officer from State Accounts Department in an equivalent cadre. | **For promotion.-** must have put in a service of not less than five years in the cadre of Accounts Superintendent. Provided that persons with not less than five years of service are not available then persons with not less than three years of service may be considered. |
| 8 | Head Master<br>11400-21600 | - | 1 | 1 | (1) By promotion from the cadre of Assistant Teachers.<br>(2) If no suitable person is available for promotion, then by deputation of a Head Master from Department of Public Instructions in an equivalent cadre. | **For promotion.-** must have put a service of not less than seven years in the cadre of Assistant Teacher. |
| 9 | Senior Librarian<br>(Rs.11400-21600) | 1 | - | 1 | (1) By promotion from the cadre of Librarian. If no suitable person is available for promotion, then<br>(2) By deputation of a Librarian from the Department of Public Library or Education Department in an equivalent cadre | **For promotion.-** must have put in a service of not less than five years in the cadre of Librarian. |
| 10 | Coaches (District Coaches)<br>(Rs.11400-21600) | - | 9 | 9<br>All the nine Posts shall be abolished on occurrence of vacancy on retirement or otherwise of present incumbents. | - | - |

33

| Sl. No. | Category of Posts and the Scale of Pay | NO of Posts P | T | Total | Method of recruitment | Minimum qualification |
|---|---|---|---|---|---|---|
| (1) | (2) | (3) | | | (4) | (5) |
| 11 | Asst. Engineer (Civil) (Rs.10800-20025) | 1 | - | 1 | By Deputation of an Assistant Engineer (Civil) from the Karnataka Public Works Engineering Department in an equivalent cadre. If no person is available for deputation, by Direct recruitment. | **For Direct Recruitment.-** Must be a holder B.E (Civil) degree. |
| 12 | Asst. Engineer (Electrical ) (Rs.10800-20025) | 1 | - | 1 | By Deputation of an Assistant Engineer (Electrical) from the Karnataka Public Works Engineering Department in an equivalent cadre. If no person is available for deputation, by Direct recruitment. | **For Direct Recruitment.-** Must be a holder degree in B.E (Electrical). |
| 13 | Accounts Superintendent (Rs.10800-20025) | 2 | - | 2 | (1) By promotion from the cadre of First Division Assistant and Stenographer in the ratio of 1:1 every second vacancy shall be filled by promotion of a Stenographer. (2) If no suitable candidate is available, then on deputation from State Accounts Department in an equivalent cadre. **Note:** First Division Assistants and Stenographers shall exercise an irrevocable option for promotion as Accounts Superintendent. | **For promotion.-** (1) First Division Assistant must have put in a service of not less than five years in his cadre and must have passed Subordinate Accounts Service Departmental Examination. (2) Stenographer must have put in a service of not less than five years in his cadre and must also have served for a period of one year as First Division Assistant and besides having passed in Subordinate Accounts Service Departmental Examination |

| Sl. No. | Category of Posts and the Scale of Pay | NO of Posts P | T | Total | Method of recruitment | Minimum qualification |
|---|---|---|---|---|---|---|
| (1) | (2) | (3) | | | (4) | (5) |
| 14 | Librarians<br>(Rs.10800-20025) | 2 | - | 2 | By promotion from the cadre of Assistant Librarian. If no suitable candidate is available for promotion, then by Deputation from Department of Public Libraries or Department of Public Instructions in an equivalent cadre | **For promotion.-** must have put in a service of not less than five years in the cadre of Assistant Librarian.<br>**For deputation.-** must be holder of a degree in Library Science of an established university or equivalent qualification. |
| 15 | Superintendents (Rs.10000-18150) | (55)<br>28 | (1)<br>- | (56)*<br>28<br>* Out of 56 Posts, 12 Posts which are vacant stand abolished with immediate effect and 16 Posts shall be abolished on occurre - nce of vacancy on retirement or otherwise of the present incumbents. | By promotion from the cadre of First Division Assistants and Stenographers in the ratio of 7:1 every 8th vacancy to be filled by promotion from the cadre of Stenographers.<br>**Note:** First Division Assistants and Stenographers shall give an irrevocable option for promotion as Superintendents. | **For promotion.-** must have put in a service not less than five years in the cadre of First Division Assistant or Stenographer. In case of stenographers must have put in a service as Stenographer for a period of five years of which not less than one year as First Division Assistant |
| 16 | Sub-Editor<br>(Rs.10000-18150) | 1 | - | 1 | By promotion from the cadre of First Division Assistant and Stenographer in the ratio of 1:1 every second vacancy being filled by promotion of a Stenographer. If no suitable candidates are available for promotion then by deputation of a sub-editor from the Department of Information in an equivalent cadre.<br>**Note:** First Division Assistant's and Stenographers shall give an irrevocable option for promotion as Sub-Editor. | (1)**For promotion.-** must be holder of a Bachelor Degree in Journalism or posses equivalent qualification.<br>(2)Must be holder of a Bachelor Degree in Kannada or posses equivalent qualification.<br>For deputation must possess not less than three years experience in publication of journals in an institution recognized by the Government |

| Sl. No. | Category of Posts and the Scale of Pay | NO of Posts P | T | Total | Method of recruitment | Minimum qualification |
|---|---|---|---|---|---|---|
| (1) | (2) | (3) | | | (4) | (5) |
| 17 | Junior Engineer (Civil)<br>(Rs.8825-16000) | 1 | - | 1 | By Deputation of Junior Engineer (Civil) from the Public Works Department in an equivalent cadre | By deputation of a Junior Engineer (Civil) in the equivalent grade from the Public Works Department. |
| 18 | Graduate Assistant<br>Master /Mistress<br>i) Asst. Master in Arts<br>ii) Asst. Master in Physical Science<br>iii) Asst. Master in Biological Science<br>iv) Language Assistant<br>(Rs.8825-16000) | - | 7 | 7 | By Direct recruitment or by deputation from Department of Public Instructions.<br>**For Direct recruitment.-** The Commissioner or Director of Youth Services and Sports Department shall invite applications from eligible candidate by advertising the vacancies in the Karnataka Gazette and also advertising at least in two leading news papers having wide circulation in the State. Application shall be filled in the Form specified for the purpose along with such fees as may be specified there in. He shall prepare the select list on the basis of merit determined on the basis of average of percentage of total marks secured in the qualifying examinations equal to the number of vacancies notified. He shall prepare the select list after following the provisions relating to reservation of Posts specified in any Law, in Karnataka Civil Services (General Recruitment) Rules 1977 and Government Orders issued in this behalf from time to time.<br>He may appoint candidates whose names are included in the list of selected candidates prepared in the manner as indicated above in the | **For Direct Recruitment.-**<br>**1)Asst. Master Arts :-**<br>(a) Must be Holder of Bachelor Degree in Arts with any two of the following subjects as optional, namely History, Economics, Geography, Political Science, Sociology and<br>(b) Must be holder of a Degree in Education<br>**2) For Asst. Master Physical Science :-**<br>(a) Must be holder of a Bachelor Degree in Science with any two of the following subjects as optional namely Physics, Chemistry, Mathematics or Physics, Mathematics, Computer Science or Physics, Mathematics, Electronics. Mathematics should be a compulsory optional subject.<br>And<br>(b) Must be holder of Degree in Education. |

| Sl. No. | Category of Posts and the Scale of Pay | NO of Posts P | NO of Posts T | NO of Posts Total | Method of recruitment | Minimum qualification |
|---|---|---|---|---|---|---|
| (1) | (2) | | (3) | | (4) | (5) |
| | | | | | vacancies, in the order in which the names are found in the list after satisfying itself after such enquiry as may be considered necessary that each of the candidate is suitable in all respects for appointment. | **3)For Asst. Master in Biological Science** :-(a) Must be holder of a Bachelor Degree in Science with any two of the following subjects as optionals.<br>Chemistry, Botany and Zoology. Chemistry should be a compulsory optional subject and<br>(b) Must be holder of a Degree in Education.<br>4) For Language Assistants:-(a) Must be holder of a Bachelor Degree in Arts with the concerned language as one of the optional subjects namely Kannada, English, Hindi, Sanskrit or 4 years Language Pandit course in Kannada, Vidvan in Sanskrit conducted by KSEEB. And<br>(b) Must be holder of Degree in Education. |
| 19 | Personality Development Instructor<br>(Rs.8825-16000) | - | 3 | 3* | - | - |
| 20 | Assistant Teacher<br>(Craft )<br>(Rs.7275-13350) | - | 1 | 1 | By deputation of a Craft Teacher in an equivalent grade from the Department of Public instructions | - |

37



| Sl. No. | Category of Posts and the Scale of Pay | NO of Posts P | T | Total | Method of recruitment | Minimum qualification |
|---|---|---|---|---|---|---|
| (1) | (2) | (3) | | | (4) | (5) |
| 21 | Assistant Teacher<br>(Middle School)<br>(Rs.6250-12000) | - | 3 | 3* | - | - |
| *These Posts are vacant and proposed to be abolished under Eighty percent cut as they are not required. | | | | | | |
| 22 | Assistant Librarian<br>(Rs.8000-14800) | 2 | - | 2 | (1)By Direct Recruitment<br>(2) If no suitable candidate is available, then by deputation of an Assistant Librarian from the Dept. of Public Libraries or Dept. of Public Instructions in an equivalent cadre. | For Direct Recruitment must be holder of a Degree in Library and Information Science from a recognized University. |
| 23 | Stenographers<br>(Rs.7275-13350) | (11)<br>06 | (07)<br>- | (18)*<br>06<br>* Out of Eighteen posts, 12 posts shall be abolished on occurrence of vacancies on retirement or otherwise of the present incumbents. | (1) Sixty percent by Direct Recruitment in accordance with the Karnataka State civil services (Recruitment to the posts of Stenographers & Typists) Rules 1983.<br>(2) Forty percent by promotion from the cadre of Typists<br>(3)If no suitable persons is available either by promotion or by direct recruitment, then the post shall be filled by deputation from other Civil Services of the State. | **For promotion:**<br>(1)Must have passed:<br>(i)SSLC examination or equivalent qualification<br>(ii)Senior Typewriting in Kannada language and senior shorthand examination in Kannada language conducted by the Department of Public Instruction or Must be holder of a diploma in Secretarial practice granted by the Board of Technical Education in Karnataka and must have put in a service as a Typist for a period of not less than five years. |

IVA -F8-B/B

| Sl. No. | Category of Posts and the Scale of Pay | NO of Posts P | T | Total | Method of recruitment | Minimum qualification |
|---|---|---|---|---|---|---|
| (1) | (2) | (3) | | | (4) | (5) |
| 24 | First Division Assistants (Rs.7275-13350) | 14 | - | 14 | (1) Fifty percent of posts by direct recruitment as per the Karnataka Civil Services (Direct Recruitment to ministerial posts) Rules 1978.<br>(2) Fifty percent of the posts to be filled by Promotion from the cadre of Second Division Assistant's on the basis of seniority cum merit. Provided that a stenographer shall be posted to work as First Division Assistant for a period of one year on the basis of seniority before promotion as Superintendent. | **(1)For Direct recruitment.-** must possess the qualification in accordance with the Karnataka Civil Services ( recruitment to the Ministerial posts ) rules 1978<br>**(2) For promotion.-** must have put in a service of not less than five years in the cadre Second Division Assistant. |
| 25 | Special Cycling Assistant (Junior Coach) (Rs.7275-13350) | - | 1 | 1 | The Post shall be abolished on occurrence of vacancy on retirement or otherwise of the present incumbent. | - |
| 26 | Coaches (Rs.6250-12000) | - | 3 | 3* | - | - |
| 27 | Second Division Assistants (Rs.5800-10500) | 34 | 7 | 41 | In accordance with the Karnataka Civil Services (Recruitment to the Ministerial Posts) Rules, 1978. | By Direct recruitment in accordance with the Karnataka Civil Services (Recruitment to the Ministerial Posts) Rules 1978 |
| 28 | Typist (Rs.5800-10500) | 5 | 1 | 6 | By direct recruitment in accordance with the Karnataka State civil services (Recruitment to the posts of Stenographers and Typists) Rules 1983. | In accordance with Karnataka State civil services (Recruitment to the posts of Stenographers and Typists) Rules 1983. |
| 29 | Drivers (Rs.5800-10500) | (1)<br>1 | (7)<br>3 | (8)**<br>4<br>** Out of Eight posts, 4 posts shall be abolished on occurrence of vacancies on retirement or otherwise of the present incumbents. | (1)Seventy five percent of the posts be filled by Direct Recruitment.<br>(2)Twenty five percent of the posts be filled on promotion from the cadre of group D. By promotion from any of the cadre of group D service on the basis of seniority. Seniority being determined by treating a person holding a post | **For direct recruitment.-**<br>(1) Must be holder of current light Motor Vehicle Driving License.<br>(2) Must have passed 7th Standard.<br>**For promotion.-**<br>Must have put in a service of not |

| Sl. No. | Category of Posts and the Scale of Pay | NO of Posts | | | Method of recruitment | Minimum qualification |
|---|---|---|---|---|---|---|
| | | P | T | Total | | |
| (1) | (2) | (3) | | | (4) | (5) |
| | | | | | carrying a higher scale of pay as senior to a person holding a post carrying a lower scale of pay. Seniority inter se among persons holding posts carrying same scale of pay being determined on the basis of length of service in the respective cadre, and seniority inter se among persons in a cadre being maintained.<br>(3)If suitable candidates are not available then to be filled by Deputation. | less than five years in the cadre of Group D satisfactorily. And must process current light Motor Vehicle Driving License besides passing 7th Standard examination. |
| *These Posts are vacant and proposed to be abolished under Eighty percent cut as they are not required. | | | | | | |
| 30 | Head Cook (Rs.5800-10500) | - | 1 | 1 | The Posts shall be abolished on occurrence of vacancy on retirement or otherwise of the present incumbent. | - |
| 31 | Cooks (Rs.5200-8200) | - | 3 | 3 | All the 3 Posts shall be abolished on occurrence of vacancy on retirement or otherwise of the present incumbents. | - |
| 32 | Lift Attenders (Rs.5200-8200) | 2 | - | 2 | By promotion from the cadre of Attender /Marker | For promotion must have put in a service of not less than five years of in the cadre of Attender /Marker |
| 33 | Attender / Marker (Rs.4800-7275) | 70 | 10 | 80 | **By Direct Recruitment**<br>Out of 80 Posts, 4 Posts shall be abolished on occurrence of vacancy on retirement or otherwise of the present incumbents. | For Direct Recruitment candidates should have passed VII Std. Examination and studied Kannada Language as one of the subjects. |

By order and in the name of Governor of Karnataka,

**M.S. Shivaram**

Under Secretary to the Government,

Youth Services Department..

29

## ಅನುಬಂಧ-೭

## ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಮಂಜೂರಾದ, ಕರ್ತವ್ಯ ನಿರ್ವಹಿಸುತ್ತಿರುವ ಮತ್ತು ಖಾಲಿ ಇರುವ ಹುದ್ದೆಗಳ ವಿವರ

| ಕ್ರಸ | ಹುದ್ದೆಯ ಹೆಸರು | ಮಂಜೂರಾದ ಹುದ್ದೆಗಳ ಸಂಖ್ಯೆ | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ | ಪ್ರಸ್ತುತ ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|
| 1 | ಆಯುಕ್ತರು | 1 | 1 | 0 |
| 2 | ಜಂಟಿ ನಿರ್ದೇಶಕರು | 2 | 2 | 0 |
| 3 | ಉಪ ನಿರ್ದೇಶಕರು | 7 | 4 | 3 |
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರು | 1 | 1 | 0 |
| 5 | ಸಹಾಯಕ ನಿರ್ದೇಶಕರು | 27 | 22 | 5 |
| 6 | ಸಂಪಾದಕರು | 1 | 0 | 1 |
| 7 | ಲೆಕ್ಕಾಧಿಕಾರಿಗಳು | 1 | 0 | 1 |
| 8 | ಮುಖ್ಯೋಪಾಧ್ಯಾಯರು | 2 | 2 | 0 |
| 9 | ಹಿರಿಯ ಗ್ರಂಥಪಾಲಕರು | 1 | 1 | 0 |
| 10 | ಸಹಾಯಕ ಅಭಿಯಂತರರು (ಸಿವಿಲ್) | 1 | 1 | 0 |
| 11 | ಸಹಾಯಕ ಅಭಿಯಂತರರು (ಎಲೆಕ್ಟ್ರಿಕಲ್) | 1 | 1 | 0 |
| 12 | ಲೆಕ್ಕಾಧೀಕ್ಷಕರು | 2 | 2 | 0 |
| 13 | ಗ್ರಂಥಪಾಲಕರು | 2 | 1 | 1 |
| 14 | ಅಧೀಕ್ಷಕರು | 34 | 7 | 27 |
| 15 | ತರಬೇತುದಾರರು | 12 | 0 | 12 |
| 16 | ಉಪ ಸಂಪಾದಕರು | 1 | 0 | 1 |
| 17 | ಕಿರಿಯ ಅಭಿಯಂತರರು (ಸಿವಿಲ್) | 1 | 0 | 1 |
| 18 | ಪದವೀಧರ ಶಿಕ್ಷಕರು | 7 | 3 | 4 |
| 19 | ಸಹ ಶಿಕ್ಷಕರು (ಹೊಲಿಗೆ) | 1 | 0 | 1 |
| 20 | ಸಹಾಯಕ ಗ್ರಂಥಪಾಲಕರು | 2 | 0 | 2 |
| 21 | ಶೀಘ್ರಲಿಪಿಗಾರರು | 6 | 3 | 3 |
| 22 | ಪ್ರಥಮ ದರ್ಜೆ ಸಹಾಯಕರು | 14 | 9 | 5 |
| 23 | ತರಬೇತುದಾರರು | 1 | 1 | 0 |
| 24 | ದ್ವಿತೀಯ ದರ್ಜೆ ಸಹಾಯಕರು | 41 | 24 | 17 |
| 25 | ಬೆರಳಚ್ಚುಗಾರರು | 6 | 2 | 4 |

| | | | | |
|---|---|---|---|---|
| 26 | ವಾಹನ ಚಾಲಕರು | 4 | 2 | 2 |
| 27 | ಲಿಫ್ಟ್ ಅಟೆಂಡರ್ | 2 | 1 | 1 |
| 28 | ಅಟೆಂಡರ್ / ಮಾರ್ಕರ್ | 76 | 31 | 45 |
| | ಒಟ್ಟು | 257 | 121 | 136 |

-27

## ಅನುಬಂಧ – 03

## ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಮಾಸಿಕ ಸಂಚಿತ ವೇತನದ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ವಿವರ

| ಕ್ರಸ | ನೌಕರರ ವಿವರ | ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವ ವರ್ಷಗಳ ವಿವರ |
|---|---|---|---|
| 01 | ತರಬೇತುದಾರರು (ಕರ್ನಾಟಕ ಕ್ರೀಡಾ ಪರಿಷತ್ ನಿಂದ ವಿಲೀನಗೊಂಡ ತರಬೇತುದಾರರು) | 03 | 32 ವರ್ಷ |
| 02 | ತರಬೇತುದಾರರು (ಕರ್ನಾಟಕ ಕ್ರೀಡಾ ಪರಿಷತ್ ನಿಂದ ವಿಲೀನಗೊಂಡ ತರಬೇತುದಾರರು) | 02 | 30 ವರ್ಷ |
| 03 | ತರಬೇತುದಾರರು (ಕರ್ನಾಟಕ ಕ್ರೀಡಾ ಪರಿಷತ್ ನಿಂದ ವಿಲೀನಗೊಂಡ ತರಬೇತುದಾರರು) | 07 | 29 ವರ್ಷ |
| | | | |
| 04 | ತರಬೇತುದಾರರು (ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ನೇಮಕಗೊಂಡವರು) | 39 | 23 ವರ್ಷ |
| 05 | ತರಬೇತುದಾರರು (ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ನೇಮಕಗೊಂಡವರು) | 02 | 22 ವರ್ಷ |
| 06 | ತರಬೇತುದಾರರು (ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ನೇಮಕಗೊಂಡವರು) | 01 | 21 ವರ್ಷ |
| 07 | ತರಬೇತುದಾರರು (ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ನೇಮಕಗೊಂಡವರು) | 27 | 19 ವರ್ಷ |
| 08 | ತರಬೇತುದಾರರು (ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ನೇಮಕಗೊಂಡವರು) | 01 | 16 ವರ್ಷ |
| | | | |
| 09 | ಪ್ರಥಮ ದರ್ಜೆ ಸಹಾಯಕರು (ನಾಲ್ಕನೇ ರಾಷ್ಟ್ರೀಯ ಕ್ರೀಡಾ ಕೂಟದಿಂದ ವಿಲೀನಗೊಂಡವರು) | 01 | 23 ವರ್ಷ |
| 10 | ಪ್ರಥಮ ದರ್ಜೆ ಸಹಾಯಕರು (ನಾಲ್ಕನೇ ರಾಷ್ಟ್ರೀಯ ಕ್ರೀಡಾ ಕೂಟದಿಂದ ವಿಲೀನಗೊಂಡವರು) | 01 | 22 ವರ್ಷ |
| | | | |
| 11 | ದ್ವಿತೀಯ ದರ್ಜೆ ಸಹಾಯಕರು (ಕರ್ನಾಟಕ ಕ್ರೀಡಾ ಪರಿಷತ್ ನಿಂದ ವಿಲೀನಗೊಂಡವರು) | 02 | 33 ವರ್ಷ |
| 12 | ದ್ವಿತೀಯ ದರ್ಜೆ ಸಹಾಯಕರು (ನಾಲ್ಕನೇ ರಾಷ್ಟ್ರೀಯ ಕ್ರೀಡಾ ಕೂಟದಿಂದ ವಿಲೀನಗೊಂಡವರು) | 01 | 23 ವರ್ಷ |
| 13 | ದ್ವಿತೀಯ ದರ್ಜೆ ಸಹಾಯಕರು (ನಾಲ್ಕನೇ ರಾಷ್ಟ್ರೀಯ ಕ್ರೀಡಾ ಕೂಟದಿಂದ ವಿಲೀನಗೊಂಡವರು) | 01 | 22 ವರ್ಷ |
| | | | |
| 14 | ಬೆರಳಚ್ಚುಗಾರರು (ಕರ್ನಾಟಕ ಕ್ರೀಡಾ ಪರಿಷತ್ ನಿಂದ ವಿಲೀನಗೊಂಡವರು) | 01 | 33 ವರ್ಷ |
| 15 | ವಾಹನ ಚಾಲಕರು (ನಾಲ್ಕನೇ ರಾಷ್ಟ್ರೀಯ ಕ್ರೀಡಾ ಕೂಟದಿಂದ ವಿಲೀನಗೊಂಡವರು) | 03 | 23 ವರ್ಷ |
| 16 | ವಾಹನ ಚಾಲಕರು (ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ನೇಮಕಗೊಂಡವರು) | 02 | 23 ವರ್ಷ |
| 17 | ದಲಾಯತ್ (ನಾಲ್ಕನೇ ರಾಷ್ಟ್ರೀಯ ಕ್ರೀಡಾ ಕೂಟದಿಂದ ವಿಲೀನಗೊಂಡವರು) | 08 | 23 ವರ್ಷ |
| | | | |
| 18 | ಮಾರ್ಕರ್ಸ್ (ಕರ್ನಾಟಕ ಕ್ರೀಡಾ ಪರಿಷತ್ ನಿಂದ ವಿಲೀನಗೊಂಡವರು) | 01 | 38 ವರ್ಷ |
| 19 | ಮಾರ್ಕರ್ಸ್ (ಕರ್ನಾಟಕ ಕ್ರೀಡಾ ಪರಿಷತ್ ನಿಂದ ವಿಲೀನಗೊಂಡವರು) | 01 | 37 ವರ್ಷ |
| 20 | ಮಾರ್ಕರ್ಸ್ (ಕರ್ನಾಟಕ ಕ್ರೀಡಾ ಪರಿಷತ್ ನಿಂದ ವಿಲೀನಗೊಂಡವರು) | 01 | 36 ವರ್ಷ |
| 21 | ಮಾರ್ಕರ್ಸ್ (ಕರ್ನಾಟಕ ಕ್ರೀಡಾ ಪರಿಷತ್ ನಿಂದ ವಿಲೀನಗೊಂಡವರು) | 01 | 35 ವರ್ಷ |
| 22 | ಮಾರ್ಕರ್ಸ್ (ಕರ್ನಾಟಕ ಕ್ರೀಡಾ ಪರಿಷತ್ ನಿಂದ ವಿಲೀನಗೊಂಡವರು) | 04 | 34 ವರ್ಷ |
| 23 | ಮಾರ್ಕರ್ಸ್ (ಕರ್ನಾಟಕ ಕ್ರೀಡಾ ಪರಿಷತ್ ನಿಂದ ವಿಲೀನಗೊಂಡವರು) | 01 | 32 ವರ್ಷ |
| 24 | ಮಾರ್ಕರ್ಸ್ (ಕರ್ನಾಟಕ ಕ್ರೀಡಾ ಪರಿಷತ್ ನಿಂದ ವಿಲೀನಗೊಂಡವರು) | 01 | 30 ವರ್ಷ |
| | | | |
| | ಒಟ್ಟು | 112 | |